# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 203**
**ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
**ಉತ್ತರಿಸುವ ದಿನಾಂಕ : 06.07.2023**
**ಉತ್ತರಿಸುವ ಸಚಿವರು : ಗೃಹ ಸಚಿವರು**

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೂಡ್ಲಗಿ ತಾಲ್ಲೂಕಿನ ಹೋಬಳಿ ಕೇಂದ್ರವಾಗಿರುವ ಕಾನಹೊಸಹಳ್ಳಿಗೆ ಅಗ್ನಿಶಾಮಕ ಠಾಣೆಯ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಮಂಜೂರು ಮಾಡುವ ವಿಷಯ ಯಾವ ಹಂತದಲ್ಲಿದೆ;</td><td>Standing Fire Advisory council (SFAC) ಅನ್ವಯ ಪ್ರತಿಯೊಂದು ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಒಂದು ಅಗ್ನಿಶಾಮಕ ಠಾಣೆಯಿಂದ ಮತ್ತೊಂದು ಅಗ್ನಿಶಾಮಕ ಠಾಣೆಯ ನಡುವಿನ ಅಂತರ ನಗರ ಪ್ರದೇಶದಲ್ಲಿ 10 ಚದರ್ ಕಿ.ಮೀ ಮತ್ತು ಗ್ರಾಮಾಂತರ ಪ್ರದೇಶದಲ್ಲಿ 50 ಚದರ್ ಕಿ.ಮೀ ನಿಗಧಿಪಡಿಸಲಾಗಿರುತ್ತದೆ.<br><br>ಪ್ರಸ್ತುತ ಕೂಡ್ಲಗಿ ತಾಲ್ಲೂಕಿನ ಹೋಬಳಿ ಕೇಂದ್ರವಾಗಿರುವ ಕಾನಹೊಸಹಳ್ಳಿಯಿಂದ 25 ಕಿ.ಮೀ ಅಂತರದಲ್ಲಿ ಜಗಳೂರು ಅಗ್ನಿಶಾಮಕ ಠಾಣೆ ಮತ್ತು 40 ಕಿ.ಮೀ ಅಂತರದಲ್ಲಿ ಕೂಡ್ಲಗಿ ಅಗ್ನಿಶಾಮಕ ಠಾಣೆ ಕಾರ್ಯನಿರ್ವಹಿಸುತ್ತಿದ್ದು, ಮೇಲೆ ತಿಳಿಸಿರುವ ಮಾನದಂಡವನ್ನು ಪಾಲಿಸಿ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲು ಅವಕಾಶವಿರುವುದಿಲ್ಲ.<br><br>ಈ ಸಂಬಂಧ ಸರ್ಕಾರದಲ್ಲಿ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. ಪ್ರಸ್ತಾವನೆ ಸ್ವೀಕೃತವಾದಲ್ಲಿ Standing Fire Advisory council (SFAC) ಮಾನದಂಡಗಳನ್ವಯ ಪರಿಶೀಲಿಸಿ ಕ್ರಮ ವಹಿಸಲಾಗುವುದು.</td></tr>
<tr><td>ಆ)</td><td>ಕೂಡ್ಲಗಿ ತಾಲ್ಲೂಕಿನ ಗಡಿ ಗ್ರಾಮಗಳು ಸುಮಾರು 60 ರಿಂದ 70 ಕಿ.ಮೀ. ದೂರವಿರುವುದರಿಂದ ಇಲ್ಲಿಗೆ ಅಗ್ನಿಶಾಮಕ ಠಾಣೆಯನ್ನು ಮಂಜೂರು ಮಾಡಲು ಸಾಧ್ಯವಾಗದಿದ್ದಲ್ಲಿ ಸುತ್ತಲಿನ 200 ಹಳ್ಳಿಗಳಿಗೆ ಮತ್ತು 30 ಸಾವಿರ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಬೆಂಕಿಯಿಂದ ಕಾಪಾಡಲು ಅಗ್ನಿಶಾಮಕ ಉಪ ಠಾಣೆಯನ್ನಾದರೂ ತೆರೆದು ವಾಹನಗಳನ್ನು ಒದಗಿಸಿದಲ್ಲಿ, ಸಾರ್ವಜನಿಕರಿಗೆ ಹಾಗೂ ಅರಣ್ಯ ಪ್ರದೇಶವನ್ನು ಬೆಂಕಿಯಿಂದ ಕಾಪಾಡಲು ಅನುಕೂಲವಾಗಲಿದ್ದು, ಈ ಬಗ್ಗೆ ಸರ್ಕಾರ ಕ್ರಮವಹಿಸುವುದೇ? (ವಿವರ ನೀಡುವುದು).</td><td>ಕಳೆದ 5 ವರ್ಷಗಳ ಅವಧಿಯಲ್ಲಿ ಸದರಿ ಪ್ರದೇಶದ ವ್ಯಾಪ್ತಿಯಲ್ಲಿ 108 ಅಗ್ನಿಕರೆಗಳು ಮತ್ತು 05 ರಕ್ಷಣಾ ಕರೆಗಳು ಸಂಭವಿಸಿದ್ದು, ವಿವರ ಈ ಕೆಳಗಿನಂತಿದೆ.<br><br><table><tr><th>ಕ್ರ.ಸಂ</th><th>ವರ್ಷ</th><th>ಅಗ್ನಿ ಕರೆ</th><th>ರಕ್ಷಣಾ ಕರೆ</th></tr><tr><td>01</td><td>2019</td><td>23</td><td>00</td></tr><tr><td>02</td><td>2020</td><td>20</td><td>01</td></tr><tr><td>03</td><td>2021</td><td>19</td><td>02</td></tr><tr><td>04</td><td>2022</td><td>16</td><td>01</td></tr><tr><td>05</td><td>2023</td><td>30</td><td>01</td></tr><tr><td></td><td>ಒಟ್ಟು</td><td>108</td><td>05</td></tr></table><br>ಕಾನಹೊಸಹಳ್ಳಿ, ಸುತ್ತಮುತ್ತಲಿನ ಹಳ್ಳಿಗಳು ಮತ್ತು ಅರಣ್ಯ ಪ್ರದೇಶದಲ್ಲಿ ಅಗ್ನಿ ಅವಘಡಗಳು ಸಂಭವಿಸಿದಲ್ಲಿ 25 ಕಿ.ಮೀ ಅಂತರದಲ್ಲಿರುವ ಜಗಳೂರು ಅಗ್ನಿಶಾಮಕ ಠಾಣೆ ಮತ್ತು 40 ಕಿ.ಮೀ ಅಂತರದಲ್ಲಿರುವ ಕೂಡ್ಲಗಿ ಅಗ್ನಿಶಾಮಕ ಠಾಣೆಯಿಂದ ತುರ್ತಾಗಿ ಸ್ಪಂದಿಸಿ ಅಗ್ನಿಅವಘಡಗಳನ್ನು ನಂದಿಸಲಾಗುತ್ತಿದೆ.</td></tr>
</table>

**ಸಂಖ್ಯೆ: ಒಇ 174 ಎಸ್‌ಎಫ್‌ಬಿ 2023.**

**(ಡಾ. ಜಿ. ಪರಮೇಶ್ವರ)**
**ಗೃಹ ಸಚಿವರು**